ಜೊತೆ ಕೆಲಸ ಮಾಡೋ ಕ್ರಿಶ್ಚಿಯನ್ ಹುಡುಗಿಯನ್ನ ಮದುವೆಯಾದ. ಇದು ನಮ್ಮ ಜಾತಿಯೊಳಗ ದೊಡ್ಡ ಕೋಲಾಹಲ ಮಾಡಿಬಿಡ್ತು. ನಮ್ಮ ಸಮುದಾಯದ ಹಿರೀಕರು ಅಂತ ಯಾರು ಇದಾರಲ್ರಿ, ಅವರು ಮಾಡಿದ ಕಟ್ಟಳೆ ರೀತೀನೆ ನಾವೆಲ್ಲ ನಡಕೋಬೇಕು. ಇವತ್ತಿಗೂ ನಮ್ಮ ಜನ ಪೊಲೀಸ್ ಸ್ಟೇಷನ್ನಿಗೆ ಹೋಗಲ್ಲ. ಹಿರಿಯರೆಲ್ಲ ಸೇರಿಕೊಂಡು ನನ್ನ ತಂಗಿ, ಹುಡುಗನ ಅಣ್ಣತಮ್ಮಂದಿರಿಗೆ ಕಿರುಕುಳ ಕೊಡಾಕೆ ಶುರುಮಾಡಿದ್ರು. ಎರಡು ಲಕ್ಷ ದಂಡಕ್ಕೆ ಬೇಡಿಕೆ ಇಟ್ರು. ಅದನ್ನ ಕಟ್ಟುವಷ್ಟು ಅನುಕೂಲಸ್ಥರಲ್ಲ ಅವ್ರು. ಪಾತ್ರೆ ಹೊತ್ತುಕೊಂಡು ಹೋಗಿ ಬೀದಿಬೀದೀಲಿ ಮಾರಾಟ ಮಾಡ್ತಾರ. ಅವತ್ತಿನ ದುಡಿಮೆ ಅವತ್ತಿನ ಹೊಟ್ಟಿಗೆ. ಒಂದು ತಗಡಿನ ಮನಿಯಾಗ ಇರ್ತಾಳ. ಅಷ್ಟು ರೊಕ್ಕ ಎಲ್ಲಿಂದ ಬರಬೇಕು ಹೇಳ್ರಿ? ಕಮ್ಯುನಿಟಿಯವರು ಕೊಟ್ಟ ಹಿಂಸೇನ ನನ್ನ ತಂಗಿ ತಾಳಲಾರದೆ ಹೋದಳು. ಕೊನೆಗೆ ಅವರು ನನ್ನ ತಂಗಿಗೆ ಏನು ಹೇಳಿದ್ರು ಗೊತ್ತಾ? ‘ಎಲ್ಲರ ಮುಂದೆ ನೀವು ನನ್ನ ಮಗ ನನ್ನ ಪಾಲಿಗೆ ಸತ್ತ ಅಂತೇಳಿ ದೈವದ ಮುಂದೆ ನೀರು ಬಿಡಬೇಕು. ನಿನ್ನ ಮಗ ಎಂದೂ ನೀವಿರೋ ಮನೆಗೆ ಬರಬಾರದು. ಹಂಗೇನಾರ ಬಂದರೆ ನಿನಗೆ ಬಹಿಷ್ಕಾರ ಹಾಕ್ತೀವಿ’ ಅಂದ್ರು. ನಾನು, ಇನ್ನೂ ಕೆಲವರು ನನ್ನ ತಂಗಿಗೆ ಕಾನೂನು ಇದೆ, ಗಟ್ಟಿಯಾಗಿರು ಅಂತೆಲ್ಲ ಧೈರ್ಯ ಹೇಳಿದ್ವಿ. ಅದಕ್ಕವಳು ‘ನೀ ಹೇಳ್ತಿಯಪ್ಪ, ನಾವು ಮುಂದಕ್ಕೆ ಇನ್ನೂ ಗಂಡು-ಹೆಣ್ಣು ಕೊಟ್ಟು ತಗೊಳ್ಳೋದದೆ... ನಮ್ಮ ಸಮಾಜ ಹೇಳಿದಂಗೆ ಕೇಳ ಬೇಕಾಗುತ್ತ’ ಅಂದುಬಿಟ್ಟಳು. ನನ್ನ ತಂಗಿ ಅವರು ಹೇಳಿದ್ದಕ್ಕೆಲ್ಲ ಒಪ್ಪಿದಳು, ಆಕಿ ಕಡೆಯಿಂದ ಎಳ್ಳುನೀರು ಬಿಡಿಸಿದ್ರು, ಬಡ್ಡಿಸಾಲ ಮಾಡಿ ದಂಡ ಕಟ್ಟಿದ್ಲು. ಇವತ್ತಿಗೂ ಮಗನ್ನ ನೋಡಬೇಕು ಅನ್ನಿಸಿದ್ರೆ ಯಾರಿಗೂ ಗೊತ್ತಾಗದ ರೀತಿ ಒಳಗೆ ಕದ್ದುಮುಚ್ಚಿ ಹೋಗಿ ಭೇಟಿ ಮಾಡಬೇಕು... ಅಕಸ್ಮಾತ್ ಇದೇನಾದ್ರು ಗೊತ್ತಾದ್ರ ಮತ್ತೆ ಪಂಚಾಯಿತಿ ಮಾಡಿ ದಂಡ ಹಾಕ್ತಾರ. ಈ ಜಾತಿಯೊಳಗ ಹುಟ್ಟಿ ಇನ್ನೂ ಏನೇನ ಅನುಭವಿಸ್ಬೇಕೋ ಏನೋ ಅಂತ ಬಹಳ ಕಾಡಸ್ತದ ಮೇಡಂ... ಕಡೆಗೆ ಮದುವೆಯಾದ ಹುಡುಗನೇ ಪೊಲೀಸ್ ಕಂಪ್ಲೇಂಟ್ ಮಾಡಿ ಅವನು ಒಂದು ಮಾದರಿಯಾದ. ಇಂಥ ಬಹಳ ಅಸಹ್ಯಕರ, ಅಮಾನವೀಯ ಘಟನೆಗಳು ಪ್ರತಿನಿತ್ಯ ನಡಿತಾವ, ಸಮುದಾಯದ ಎಪ್ಪತ್ತೈದು ಪ್ರತಿಶತ ಮಂದಿ ಇದನ್ನ ನಡಸ್ತಾರ... ಶಿಕ್ಷಣ ಪಡೆದವರಲ್ಲಿ ಕೂಡ ಬಹಳಷ್ಟು ಮಂದಿ ಇದೇ ರೂಢಿ ನಡಸ್ಕೊತಾ ಬಂದಾರ. ನಮ್ಮ ಜನ ನೂರು ವರ್ಷದ ಹಿಂದೆ ಹೆಂಗಿದ್ರೋ, ಎಲ್ಲಿದ್ರೋ ಇವತ್ತು ಕೂಡ ಅಲ್ಲೇ, ಹಂಗೇ ಅದಾರ. ಹೊಸದಾರಿ, ಹೊಸಗಾಳಿ ಯಾವ ಕಾಲಕ್ಕ ಬರ್ತದೋ ದೇವರಿಗೇ ಗೊತ್ತು... ನೋಡ್ರಿ, ಇವತ್ತು ನಮ್ಮ ಸಮುದಾಯದ

